# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-956/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 14/06/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ರಮೇಶ್ ಶೇಟ್, ಮಿಶನ್ ಸ್ಕೂಲ್ ರಸ್ತೆ, ಕುಂದಾಪುರ, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ರಮೇಶ್ ಶೇಟ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕುಂದಾಪುರ ಕಸಬದ ಈಸ್ಟ್ ಬ್ಲಾಕ್ ವಾರ್ಡ್‌ನ ಮಿಶನ್ ಶಾಲೆಯ ಪೂರ್ವ ಭಾಗದಲ್ಲಿ ಹಾಗೂ ಪುರಸಭಾ ಕಛೇರಿಯ ರಸ್ತೆ "Style in Town" ಎದುರುಗಡೆ ಅನಧೀಕೃತವಾಗಿ ಹಾಗೂ ಅಕ್ರಮವಾಗಿ ತ್ಯಾಜ್ಯ ನೀರು ಪೈಪುಗಳನ್ನು ಅಳವಡಿಸಿದ್ದು, ಇದರ ಬಗ್ಗೆ ದೂರುದಾರರು ಜಿಲ್ಲಾಧಿಕಾರಿ, ಉಡುಪಿ ರವರಿಗೆ ದಿ:30/05/2015 ರಂದು ದೂರನ್ನು ನೀಡಿದ್ದು, ಸದರಿ ದೂರಿನ ಬಗ್ಗೆ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಹಾಗೂ ಸಹಾಯಕ ಕಮೀಷನರ್, ಕುಂದಾಪುರ ಇವರುಗಳು ಸ್ಥಳ ಪರಿಶೀಲಿಸಿ ಪುರಸಭಾ ಮುಖ್ಯಾಧಿಕಾರಿಯವರಿಗೆ ಸದರಿ ಪೈಪ್ ಲೈನ್ ಅನ್ನು ತೆಗೆದು ಹಾಕಬೇಕೆಂದು ಸೂಚಿಸಿರುತ್ತಾರೆ. ಸದರಿ ಸೂಚನೆ ಮೇರೆಗೆ ಮುಖ್ಯಾಧಿಕಾರಿಯವರು ತಮ್ಮ ದಿ:16/06/2015ರ ಪತ್ರದ ಮುಖೇನ ಸಹಾಯಕ ಕಮೀಷನರ್ ರವರಿಗೆ ಪೈಪ್‌ಗಳನ್ನು ತೆಗೆದಿರುವುದಾಗಿ ವರದಿ ನೀಡಿರುತ್ತಾರೆ. ಪುರಸಭಾ ಮುಖ್ಯಾಧಿಕಾರಿಯವರು ನೀಡಿದ ವರದಿಯ ಮೇರೆಗೆ ಸಹಾಯಕ ಕಮೀಷನರ್ ರವರು ಉಡುಪಿ ಜಿಲ್ಲಾಧಿಕಾರಿಯವರಿಗೆ ಪೈಪ್ ಅನ್ನು ತೆಗೆದಿರುವುದಾಗಿ ವರದಿ ಮಾಡಿರುತ್ತಾರೆ. ಆದರೆ, ದೂರುದಾರರು ಪೈಪುಗಳನ್ನು ತೆಗೆಯದೇ ಇರುವುದನ್ನು ಕಂಡು ಮುಖ್ಯಾಧಿಕಾರಿಗಳು ವರದಿ ಮಾಡಿರುವುದು ಸುಳ್ಳೆಂದು ಕಂಡು ಬಂದ ಕಾರಣ, ದೂರುದಾರರು ಉಡುಪಿಯ ಜಿಲ್ಲಾಧಿಕಾರಿಗಳಿಗೆ ದಿ:21/09/2015 ರ ಪತ್ರದ ಮುಖೇನ ಸದರಿ ಪೈಪುಗಳನ್ನು ತೆಗೆಯದೇ ಇರುವ ಬಗ್ಗೆ ತಿಳಿಸಿ ಮುಖ್ಯಾಧಿಕಾರಿಗಳು, ಪುರಸಭೆ ರವರಿಗೆ ಪೈಪುಗಳನ್ನು ತೆಗೆಯಲು ನಿರ್ದೇಶನ ನೀಡಬೇಕೆಂದು ಕೋರಿದ್ದು, ಜಿಲ್ಲಾಧಿಕಾರಿಗಳಿಗೆ ಸದರಿ ಪೈಪುಗಳನ್ನು "ಶ್ರಮಧಾನ" ಕೈಗೊಂಡು ಅವುಗಳನ್ನು ತೆಗೆಯುವುದಾಗಿ ತಿಳಿಸಿರುತ್ತಾರೆ. ಇದಾದ ನಂತರ ಮುಖ್ಯಾಧಿಕಾರಿಗಳು, ಪುರಸಭೆ, ಕುಂದಾಪುರ ರವರು

ಪೈಪ್‌ಗಳನ್ನು ತೆಗೆಯಲು ಯಾವುದೇ ಕ್ರಮ ಜರುಗಿಸದೇ ಇದ್ದ ಹಿನ್ನೆಲೆಯಲ್ಲಿ, ದೂರುದಾರರು ಕುಂದಾಪುರದ ಸಹಾಯಕ ಕಮೀಷನರ್ ಇವರಿಗೆ ಅವರು ಹೊರಡಿಸಿದ್ದ ಆದೇಶದಂತೆ ಸದರಿ ಅಕ್ರಮ ಪೈಪ್‌ಗಳನ್ನು ತೆಗೆಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು. ಆದಾಗ್ಯೂ ಸಹ ಪುರಸಭಾ ಮುಖ್ಯಾಧಿಕಾರಿಯವರು ಕುಂದಾಪುರದ ಮಿಶನ್ ಶಾಲೆಯ ಪಶ್ಚಿಮ ಭಾಗದಲ್ಲಿ ಸ್ಥಳೀಯ ಸಂಸ್ಥೆಯ ಅನುಮತಿಯನ್ನು ಪಡೆಯದೇ ಅಕ್ರಮವಾಗಿ ರಸ್ತೆಯನ್ನು ಅಗೆದು ಪೈಪ್‌ಗಳನ್ನು ಹಾಕುತ್ತಿರುವ ಬಗ್ಗೆ ಹೊರಡಿಸಿದ್ದ ಆದೇಶವನ್ನು ಉಲ್ಲಂಘಿಸಿರುವ ಕಾರಣ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ಸದರಿ ಅಕ್ರಮವಾಗಿ ರಸ್ತೆಯನ್ನು ಅಗೆದು ಪೈಪ್‌ಗಳನ್ನು ಹಾಕುತ್ತಿರುವುದನ್ನು ತಡಗಟ್ಟಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಎದುರುದಾರರಿಗೆ ನೀಡಲಾಗಿದ್ದ ನೋಟೀಸ್‌ನ ಸ್ವೀಕೃತಿ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಆದರೆ, ಪೋಸ್ಟಲ್ ವೆಬ್ ಸೈಟ್ ಅನ್ನು ಪರಿಶೀಲಿಸಿದಲ್ಲಿ ಸದರಿ ನೋಟೀಸ್ ಅನ್ನು ದಿ:08/05/2017 ರಂದು ಜಾರಿಗೊಳಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ. ಆದ್ದರಿಂದ, ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸದೇ ಇರುವ ಹಿನ್ನೆಲೆಯಲ್ಲಿ, ದೂರಿನಂಶಗಳ ಬಗ್ಗೆ ಅವರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ದಿ:29/05/2015 ರಂದು ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಮಿಶನ್ ಶಾಲೆಯ ರಸ್ತೆಯ ಪಶ್ಚಿಮ ಭಾಗದಲ್ಲಿ ನೆಲವನ್ನು ಅಗೆದು ನಂತರ ಅದನ್ನು ಮುಚ್ಚಲಾಗಿರುತ್ತದೆ ಎಂದು ಆನಂತರ ಅದೇ ರಸ್ತೆಯ ಪೂರ್ವ ಭಾಗದಲ್ಲಿ ರಸ್ತೆಯನ್ನು ಅಕ್ರಮವಾಗಿ ಅಗೆದು, ಅಗೆದ ಜಾಗದಲ್ಲಿ ಕೊಳಚೆ ನೀರು ಹರಿಸಲು ಸಲುವಾಗಿ ಅಕ್ರಮವಾಗಿ ನೆಲವನ್ನು ಅಗೆದು ಚರಂಡಿ ಪೈಪುಗಳನ್ನು ಅಳವಡಿಸುತ್ತಿದ್ದು, ಈ ಚರಂಡಿ ಕೊಳವೆಗಳನ್ನು ಖಾಸಗಿ ವ್ಯಕ್ತಿಗಳು ಅಳವಡಿಸಿದ್ದು, ಅವರಿಗೆ ಪರೋಕ್ಷವಾಗಿ ಸಂಬಂಧಪಟ್ಟ ಅಧಿಕಾರಿಗಳು ಸಹಕರಿಸಿರುತ್ತಾರೆ. ಪುರಸಭೆ ರಸ್ತೆಯ ಪೂರ್ವಭಾಗದಲ್ಲಿ ಹಾಗೂ ಸದರಿ ಪುರಸಭಾ ರಸ್ತೆ ಹಾಗೂ ಮಿಶನ್ ಸ್ಕೂಲ್ ರಸ್ತೆ ಸೇರುವ ಜಾಗದಲ್ಲಿ ಹಾಗೆಯೇ ರಾಮ ಮಂದಿರ ರಸ್ತೆಯನ್ನು ಸಹ ಅಗೆಯಲಾಗಿದ್ದು, ಅಲ್ಲಿ ಅಕ್ರಮವಾಗಿ ಚರಂಡಿ ಪೈಪುಗಳನ್ನು ಅಳವಡಿಸಲಾಗಿರುತ್ತದೆ. ಇದಕ್ಕೆ ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

4. ಜಿಲ್ಲಾಧಿಕಾರಿಯವರು ದೂರುದಾರರ ದೂರಿನ ಮೇಲೆ ಕುಂದಾಪುರದ ಸಹಾಯಕ ಕಮೀಷನರ್‌ರವರಿಗೆ ಸ್ಥಳ ಪರಿಶೀಲಿಸಿ ಕಾನೂನು ಕ್ರಮ ಜರುಗಿಸಿ ಒಂದು ವಾರದಲ್ಲಿ ವರದಿ ಸಲ್ಲಿಸುವಂತೆ ಆದೇಶಿಸಿದ್ದು, ಅದರಂತೆ, ಸಹಾಯಕ ಕಮೀಷನರ್ ರವರು ಸ್ಥಳ ಪರಿಶೀಲಿಸಿ ಮುಖ್ಯಾಧಿಕಾರಿಯವರಿಗೆ ಪತ್ರ ಬರೆದು, ದೂರುದಾರರು ತಿಳಿಸಿರುವಂತೆ ಅನಧೀಕೃತವಾಗಿ ಚರಂಡಿ ಕೊಳವೆಯನ್ನು ಅಳವಡಿಸುತ್ತಿರುವ ಬಗ್ಗೆ ಹಾಗೂ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ತಮ್ಮ ಕಛೇರಿಗೆ ಮಾಹಿತಿ ನೀಡುವಂತೆ ಸಹಾಯಕ ಕಮೀಷನರ್ ಕುಂದಾಪುರ ಇವರು ಮುಖ್ಯಾಧಿಕಾರಿಯವರಿಗೆ ತಮ್ಮ ದಿ:20/05/2015ರ ಪತ್ರದ ಮುಖೇನ ತಿಳಿಸಿರುತ್ತಾರೆ. ಅದರಂತೆ, ದಿ:16/06/2015ರ ಪತ್ರದ ಮುಖೇನ ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿಯಾದ ಎದುರುದಾರರು ಕುಂದಾಪುರ ಪುರಸಭಾ ವ್ಯಾಪ್ತಿಯ ಮಿಶನ್ ಶಾಲೆಯ ರಸ್ತೆಯಲ್ಲಿ ಅನಧೀಕೃತವಾಗಿ ಪೈಪ್ ಅಳವಡಿಸಲು ಹೊಂಡ ತೆಗೆಯುತ್ತಿರುವ ಬಗ್ಗೆ ಸದರಿ ರಸ್ತೆಯ ಕಟ್ಟಡ ನಂಬರ್ 498/2 ರಲ್ಲಿ ವಾಸವಿರುವ ದೂರುದಾರರು ಮೇಲಧಿಕಾರಿಗಳಿಗೆ ಹಾಗೂ ತಮ್ಮ ಕಛೇರಿಗೆ ಅರ್ಜಿಗಳನ್ನು ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗಿ ಕುಂದಾಪುರ ಪುರಸಭಾ ವ್ಯಾಪ್ತಿಯ ವೆಸ್ಟ್ ಬ್ಲಾಕ್ ರಸ್ತೆಯಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ರಶಮಿ ರೆಸಿಡೆನ್ಸಿ ವಸತಿ ಸಮುಚ್ಛಯದಲ್ಲಿ ಸ್ಥಾಪಿಸಿರುವ ಶುದ್ದೀಕರಣ ಘಟಕದಿಂದ ಹೊರಬರುವ ನೀರನ್ನು ಪುರಸಭೆಯ ಮಳೆ ನೀರು ಹರಿಯುವ ಚರಂಡಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಪೈಪ್ ಅಳವಡಿಸಲು ಶ್ರೀ ದಶಮಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಇವರು ತಮ್ಮ ಕಛೇರಿಗೆ ದಿ:18/05/2015 ರಂದು ಮನವಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ, ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಅವರಿಗೆ ಅನುಮತಿಯನ್ನು ನೀಡಿರುವುದಿಲ್ಲ. ಹಾಗೂ ಅನಧೀಕೃತವಾಗಿ ನಿರ್ಮಿಸುತ್ತಿರುವ ಪೈಪ್‌ಅಳವಡಿಸುವ ಕಾರ್ಯವನ್ನು ಕೂಡಲೇ ಸ್ಥಗಿತಗೊಳಿಸಲು ತಿಳಿಸಿ ದಿ:19/05/2015 ರಂದು ಹಿಂಬರಹವನ್ನು ನೀಡಲಾಗಿರುತ್ತದೆ. ಹಾಗೂ ದೂರುದಾರರ ಅರ್ಜಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಜಿಲ್ಲೆ ಹಾಗೂ ಸಹಾಯಕ ಕಮೀಷನರ್ ಇವರ ಸಮ್ಮುಖದಲ್ಲಿ ಸ್ಥಳ ತನಿಖೆ ನಡೆಸಲಾಗಿದ್ದು, ಆ ಸಂದರ್ಭದಲ್ಲಿ ಸಹಾಯಕ ಕಮೀಷನರ್ ಇವರು ನೀಡಿದ ಮೌಖಿಕ ಆದೇಶದಂತೆ ಅನಧೀಕೃತವಾಗಿ ಅಳವಡಿಸುತ್ತಿರುವ ಪೈಪ್ ಅನ್ನು ತೆರವುಗೊಳಿಸಿ ಅಗೆಯಲಾಗಿದ್ದ ಹೊಂಡವನ್ನು ಮುಚ್ಚಲಾಗಿರುತ್ತದೆ. ಹಾಗೂ ದೂರುದಾರರಿಗೆ ಈ ಬಗ್ಗೆ ಹಿಂಬರಹವನ್ನು ನೀಡಲಾಗಿರುತ್ತದೆ ಎಂದು ವರದಿಯನ್ನು ಸಹಾಯಕ ಕಮೀಷನರ್, ಕುಂದಾಪುರ ಇವರಿಗೆ ಸಲ್ಲಿಸಿರುತ್ತಾರೆ (ಸದರಿ ವರದಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ಆದರೆ, ದೂರುದಾರರು ಸ್ಥಳವನ್ನು ಪರಿಶೀಲಿಸಿ ಸಹಾಯಕ ಆಯುಕ್ತರಿಗೆ ಪತ್ರ ಬರೆದಿದ್ದು, ಅದರಲ್ಲಿ ಪುರಸಭೆಯ ಮುಖ್ಯಾಧಿಕಾರಿಯವರು ಸಹಾಯಕ

ಕಮೀಷನರ್ ರವರು ನೀಡಿದ ನಿರ್ದೇಶನದಂತೆ ಕ್ರಮ ಕೈಗೊಳ್ಳದೇ ಚರಂಡಿಯ ಕೊಳವೆಗಳು ಇನ್ನು ತೆರವುಗೊಳ್ಳದೇ ಹಾಗೆಯೇ ಇರುತ್ತದೆ ಎಂದು ಆದ್ದರಿಂದ, ಸದರಿ ಕೊಳವೆಗಳನ್ನು ತೆಗೆದು ಹಾಕಲು ಮತ್ತೆ ಆದೇಶ ನೀಡಬೇಕೆಂದು ಕೋರಿರುತ್ತಾರೆ (ಸದರಿ ದೂರುದಾರರ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

5. ದೂರುದಾರರ ಸದರಿ ಪತ್ರದ ಮೇರೆಗೆ ಸಹಾಯಕ ಕಮೀಷನರ್, ಕುಂದಾಪುರ ಇವರು ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿಗಳಿಗೆ ದಿ:07/10/2016 ರ ಪತ್ರ ಬರೆದು, ಕುಂದಾಪುರ ಪುರಸಭಾ ವ್ಯಾಪ್ತಿಯ ಈಸ್ಟ್ ಬ್ಲಾಕ್ ವಾರ್ಡ್‌ನ ಮಿಶನ್ ಶಾಲೆಯ ಪೂರ್ವ ಭಾಗದಲ್ಲಿ ಹಾಗೂ ಪುರಸಭಾ ಕಛೇರಿಯ "Style in Town" ಎದುರುಗಡೆ ಅನಧೀಕೃತವಾಗಿ ಹಾಗೂ ಅಕ್ರಮವಾಗಿ ತ್ಯಾಜ್ಯನೀರು ಕೊಳವೆಗಳನ್ನು ಅಳವಡಿಸಿದ್ದು, ಸದರಿ ಕೊಳವೆಗಳನ್ನು ತೆಗೆಯಲು ಮೌಖಿಕವಾಗಿ ಆದೇಶ ನೀಡಿದ್ದರೂ, ಮುಖ್ಯಾಧಿಕಾರಿಯವರು ಸದರಿ ಕೊಳವೆಗಳನ್ನು ತೆಗೆದಿರುವುದಾಗಿ ವರದಿ ನೀಡಿರುತ್ತಾರೆಂದು, ಆದರೆ, ದೂರುದಾರರು ಸ್ಥಳ ಪರಿಶೀಲಿಸಿ ಅನಧೀಕೃತವಾಗಿ ಅಳವಡಿಸಿದ ಕೊಳವೆಗಳನ್ನು ಇದುವರೆಗೂ ತೆರವುಗೊಳಿಸಿಲ್ಲವೆಂದು ಆದ್ದರಿಂದ, ಸದರಿ ಅನಧೀಕೃತ ಕೊಳವೆಗಳನ್ನು ತೆರವುಗೊಳಿಸಬೇಕೆಂದು ದೂರುದಾರರು ತಮ್ಮ ಪತ್ರದ ಮುಖೇನ ಕೋರಿರುತ್ತಾರೆ. ಆದ್ದರಿಂದ, ಕುಂದಾಪುರ ಪುರಸಭೆ ವ್ಯಾಪ್ತಿಯ ಈಸ್ಟ್ ಬ್ಲಾಕ್ ವಾರ್ಡ್‌ನ ಮಿಶನ್ ಶಾಲೆಯ ಪೂರ್ವ ಭಾಗದಲ್ಲಿ ಹಾಗೂ ಪುರಸಭಾ ಕಛೇರಿಯ ರಸ್ತೆಯ "Style in Town" ಎದುರುಗಡೆ ಅನಧೀಕೃತವಾಗಿ ಹಾಗೂ ಅಕ್ರಮವಾಗಿ ಅಳವಡಿಸಿರುವ ಕೊಳವೆಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಂಡು, ಈ ಬಗ್ಗೆ ತಮ್ಮ ಕಛೇರಿಗೆ ಅತೀ ಜರೂರಾಗಿ ವರದಿ ನೀಡುವಂತೆ ಸೂಚಿಸಿರುತ್ತಾರೆ (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಇದರಿಂದ, ದೂರುದಾರರು ಸಲ್ಲಿಸಿದ ದೂರಿನ ಮೇರೆಗೆ ಮುಖ್ಯಾಧಿಕಾರಿಗಳಿಗೆ ಕುಂದಾಪುರದ ಸಹಾಯಕ ಕಮೀಷನರ್‌ರವರು ಸದರಿ ಶ್ರೀ ದಶಮಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಇವರು ಅನಧೀಕೃತವಾಗಿ ಹಾಗೂ ಅಕ್ರಮವಾಗಿ ಕುಂದಾಪುರ ಪುರಸಭಾ ವ್ಯಾಪ್ತಿಯ ವೆಸ್ಟ್ ಬ್ಲಾಕ್ ರಸ್ತೆಯಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಶ್ರೀ ದಶಮಿ ರೆಸಿಡೆನ್ಸಿ ವಸತಿ ಸಮುಚ್ಚಯದಲ್ಲಿ ಸ್ಥಾಪಿಸಿರುವ ಶುದ್ದೀಕರಣ ಘಟಕದಿಂದ ಹೊರಬರುವ ನೀರನ್ನು ಪುರಸಭೆಯ ಮಳೆ ನೀರು ಹರಿಯುವ ಚರಂಡಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ರಸ್ತೆಯನ್ನು ಅಗೆದು ಪೈಪ್‌ಗಳನ್ನು ಅಳವಡಿಸುತ್ತಿರುವುದನ್ನು ತೆರವುಗೊಳಿಸಲು ಆದೇಶ ನೀಡಿದ್ದರೂ, ಸದರಿ ಪೈಪ್‌ಗಳನ್ನು ತೆರವುಗೊಳಿಸಿ ಹೊಂಡವನ್ನು ಮುಚ್ಚಿರುವುದಾಗಿ ವರದಿಯನ್ನು ಸಹಾಯಕ ಕಮೀಷನರ್‌ರವರಿಗೆ ಸಲ್ಲಿಸಿದ್ದು, ಅದರಂತೆ, ಕುಂದಾಪುರದ ಸಹಾಯಕ ಕಮೀಷನರ್ ರವರು ಜಿಲ್ಲಾಧಿಕಾರಿಯವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. (ಸದರಿ

ವರದಿಯನ್ನು ಹಾಜರುಪಡಿಸಲಾಗಿದೆ). ಆದರೆ, ಸದರಿ ಪೈಪ್‌ಗಳನ್ನು ತೆರವುಗೊಳಿಸದೇ ವರದಿಯನ್ನು ನೀಡಿರುವುದಾಗಿ, ಮೇಲೆ ಹೇಳಿದ ಸಹಾಯಕ ಕಮೀಷನರ್, ಕುಂದಾಪುರ ರವರು ಮುಖ್ಯಾಧಿಕಾರಿಗಳು, ಕುಂದಾಪುರ ಪುರಸಭೆಗೆ ಬರೆದಿರುವ ಪತ್ರದಿಂದ ಕಂಡು ಬರುತ್ತದೆ. ಇದಲ್ಲದೇ, ದೂರುದಾರರು ಈ ಪ್ರಕರಣದಲ್ಲಿ ಮಾಡಿರುವ ಆರೋಪದ ಮೇರೆಗೆ ಎದುರುದಾರರಾದ ಕುಂದಾಪುರ ಪುರಸಭಾ ಮುಖ್ಯಾಧಿಕಾರಿಯವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದ್ದಾಗ್ಯೂ ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಕುಂದಾಪುರ ಕಸಬದ "ಈಸ್ಟ್ ಬ್ಲಾಕ್ ವಾರ್ಡ್‌ನ ಮಿಶನ್ ಶಾಲೆಯ ಪೂರ್ವ ಭಾಗದಲ್ಲಿ ಹಾಗೂ ಪುರಸಭಾ ಕಛೇರಿಯ ರಸ್ತೆ 'Style in Town' ಎದುರುಗಡೆ ಶ್ರೀ ದಶಮಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಇವರು ಕುಂದಾಪುರ ಪುರಸಭಾ ವ್ಯಾಪ್ತಿಯ ವೆಸ್ಟ್ ಬ್ಲಾಕ್ ರಸ್ತೆಯಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಶ್ರೀ ದಶಮಿ ರೆಸಿಡೆನ್ಸಿ ವಸತಿ ಸಮುಚ್ಛಯದಲ್ಲಿ ಸ್ಥಾಪಿಸಿರುವ ಶುದ್ಧೀಕರಣ ಘಟಕದಿಂದ ಹೊರಬರುವ ತ್ಯಾಜ್ಯ ನೀರನ್ನು ಪುರಸಭೆಯ ಮಳೆ ನೀರು ಹರಿಯುವ ಚರಂಡಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಅನಧೀಕೃತವಾಗಿ ಹಾಗೂ ಅಕ್ರಮವಾಗಿ ರಸ್ತೆಯನ್ನು ಅಗೆದು ಪೈಪ್‌ಗಳನ್ನು ಅಳವಡಿಸುತ್ತಿರುವುದನ್ನು ತೆರವುಗೊಳಿಸಲು ಸೂಕ್ತ ಹಾಗೂ ನ್ಯಾಯಯುತ ಕ್ರಮ ಜರುಗಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 14/6/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 14/6/17